ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ, ದಿನಾಂಕ ೨೨ನೇ ಮಾರ್ಚ್ ೧೯೮೮ ಜೈತ್ರ ೨, ೧೯೧೦ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನು ಅಲಂಕರಿಸಿದರು]

ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು.—ಈಗ ಸಂತಾಪ ಸೂಚಕ ನಿರ್ಣಯ.

ಶ್ರೀ ಎಂ. ವಂಟ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಸಭೆಯಲ್ಲಿ ಜನತಾ ಪಕ್ಷದ ಸದಸ್ಯರೇ ಹೆಚ್ಚಾಗಿ ಬಂದಿಲ್ಲ. ಅವರುಗಳು ಏನಾದರೂ ಮುಖ್ಯಮಂತ್ರಿಗಳ ಮೇಲೆ ಸಿಟ್ಟು ಮಾಡಿಕೊಂಡಿದ್ದಾರೆಯೇ ಹೇಗೆ ?

ಅಧ್ಯಕ್ಷರು.—ಈಗ ಸಭೆಯಲ್ಲಿ ಕೋರಂ ಇದೆ. ಆದ್ದರಿಂದ ಸಭೆ ನಡೆಸಲಾಗುತ್ತದೆ. ಸಭೆಗೆ ಯಾರು ಬಂದಿದ್ದಾರೆ ಅಥವಾ ಯಾರು ಬಂದಿಲ್ಲ ಎಂಬುದು ಈಗ ಮುಖ್ಯವಲ್ಲ. ಇದನ್ನು ನೋಡಿಕೊಳ್ಳುವುದು ಎರಡು ಕಡೆಯ ಮುಖ್ಯಸಚೇತಕರ ಕೆಲಸ.

ಈ ಕೆಳಕಂಡ ಮಾಜಿ ಸದಸ್ಯರುಗಳು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

೧) ಮಾಜಿ ಶಾಸಕರಾದ ಶ್ರೀ ಅಂದಾನಪ್ಪ ಇವರು ದಿನಾಂಕ : ೨೭-೪-೧೯೮೭ ರಂದು ನಿಧನರಾದರು. ಮಾನ್ಯರು ೧೯೫೭ ರಿಂದ ೧೯೫೭ ರವರೆಗೆ ವಿಧಾನಸಭಾ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೨) ಮಾಜಿ ಶಾಸಕರಾದ ಶ್ರೀ ಟಿ. ಸಿ. ಹೊನ್ನಪ್ಪ ಇವರು ದಿನಾಂಕ : ೩೧-೧-೧೯೮೮ ರಂದು ನಿಧನರಾದರು. ಮಾನ್ಯರು ೧೯೪೫ ರಿಂದ ೧೯೪೯ ತನಕ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಮತ್ತು ೧೯೫೦ ರಿಂದ ೧೯೫೧ರವರೆಗೆ ವಿಧಾನಸಭಾ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ,

೩) ಮಾಜಿ ಶಾಸಕರಾದ ಶ್ರೀ ಚಿಕ್ಕೆಗೌಡ ಪಾಟೀಲರು ದಿನಾಂಕ : ೫-೨-೧೯೮೮ ರಂದು ನಿಧನರಾದರು. ಮಾನ್ಯರು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು, ೧೯೬೭ ರಿಂದ ೧೯೭೧ ರವರೆಗೆ ವಿಧಾನಸಭಾ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೪) ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಶಿಂಗಲಾಚಾರ್ ಅವರು ದಿನಾಂಕ ೧೩-೨-೧೯೮೮ ರಂದು ನಿಧನರಾದರು. ಮಾನ್ಯರು ೧೯೫೯ ರಿಂದ ೧೯೪೧ ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೫) ಮಾಜಿ ಶಾಸಕರಾದ ಶ್ರೀ ದೇವಪ್ಪ ಸಾಮಣ್ಣನವರು ದಿನಾಂಕ : ೧೬-೩-೧೯೮೮ ರಂದು ನಿಧನರಾದರು. ಮಾನ್ಯರು ೧೯೬೪ ರಿಂದ ೧೯೬೭ರವರೆಗೆ ವಿಧಾನಸಭಾ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರುಗಳ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು)

ಅಧ್ಯಕ್ಷರು.—ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅಗಲಿದ ಸದಸ್ಯರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಎಲ್. ಓ. ಸಿ. ಹಣದ ಬಿಡುಗಡೆ

೩೩೫. ಶ್ರೀಮತಿ ಲೀಲಾದೇವಿ ಆರ್, ಪ್ರಸಾದ್ (ಅಥಣಿ),— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಯಾವ ಯಾವ ಇಲಾಖೆಗೆ ಎಲ್. ಓ. ಸಿ. ಕೊಡುವ ಅಧಿಕಾರವಿದೆ. ಆ ಪ್ರಕಾರ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಇಲಾಖೆಗಳಿಗೆ ಎಲ್. ಓ. ಸಿ. ಬಿಡುಗಡೆ ಮಾಡಲಾಗಿದೆ ?

ಆ) ಎಲ್.ಓ.ಸಿ. ಕೊಟ್ಟ ಪ್ರಕಾರ ಇಲಾಖಾವಾರು ಹಾಗೂ ಜಿಲ್ಲಾವಾರು ಬಿಡುಗಡೆ ಆಗಿರುವ ಹಣವೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು),—

ಅ) ರಾಜ್ಯ ಸರ್ಕಾರದಲ್ಲಿ ಆರ್ಥಿಕ ಇಲಾಖೆಗೆ ಎಲ್.ಓ.ಸಿ. ಕೊಡುವ ಅಧಿಕಾರವಿದೆ. ಆ ಪ್ರಕಾರ ರಾಜ್ಯದ ಹಲವಾರು ಜಿಲ್ಲೆಗಳಲ್ಲಿರುವ ಲೋಕೋಪಯೋಗಿ ಇಲಾಖೆ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯ್ತಿ ರಾಜ್ ಇಲಾಖೆ, ರೇಷ್ಮೆ ಇಲಾಖೆಯಲ್ಲಿ ಲೋಕೋಪಯೋಗಿ ಕಾಮಗಾರಿಗಳನ್ನು ನೋಡಿ ಕೊಳ್ಳುತ್ತಿರುವ ಮುಖ್ಯ ಇಂಜಿನಿಯರು : ಇಂಜಿನಿಯರುಗಳಿಗೆ ಸರ್ಕಾರದ ನಿಯಮಗಳ ಪ್ರಕಾರ ಎಲ್.ಓ.ಸಿ.ಯನ್ನು ಬಿಡುಗಡೆ ಮಾಡಲಾಗುತ್ತದೆ. ಆದರಂತೆ ಆಯಾಯಾ ಇಂಜಿನಿಯರುಗಳಿಗೆ ಮಾತ್ರ ಎಲ್.ಓ.ಸಿ.ಯನ್ನು ಬಿಡುಗಡೆ ಮಾಡಲಾಗಿದೆ, ಬಿಡುಗಡೆಯಾದ ಹಣವನ್ನು ಯೋಜನೆಗಳಿಗೆ ನಿರ್ದಿಷ್ಟ ಕೆಲಸಗಳಿಗೆ ಉಪಯೋಗಿಸುವುದರಿಂದ ಜಿಲ್ಲಾವಾರು ಬಿಡುಗಡೆಯ ಮಾಹಿತಿ ಸಿಗುವುದಿಲ್ಲ.

ಆ) ಮೇಲೆ ಹೇಳಿದ ಇಲಾಖೆಗಳಿಗೆ ಪ್ರಸ್ತುತ ವರ್ಷದಲ್ಲಿ ಇನ್ನೂ ಬಿಡುಗಡೆಯಾಗ ಬೇಕಾಗಿರುವ ಒಟ್ಟು ಹಣ ರೂ. ೮೯.೧೯ ಕೋಟಿಗಳು.

		(ರೂ. ಕೋಟಿಗಳಲ್ಲಿ)
೧) ಲೋಕೋಪಯೋಗಿ ಇಲಾಖೆ	...	೭೭.೮೭
೨) ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯ್ತಿ ರಾಜ್ ಇಲಾಖೆ	...	೩.೫೨
೩) ರೇಷ್ಮೆ ಇಲಾಖೆ.	...	೭.೮೦
ಒಟ್ಟು	...	೮೯.೧೯

(ಇದು ೧೯-೩-೧೯೮೮ ದಿನಾಂಕದ ಪರಿಸ್ಥಿತಿಯನ್ನು ಸೂಚಿಸುತ್ತದೆ)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.— ಸನ್ಮಾನ್ಯ ಅಧ್ಯಕ್ಷರೆ, ಈ ಮೂರು ಇಲಾಖೆಗಳಿಗೆ ಈ ವರ್ಷದಲ್ಲಿ ಇನ್ನೂ ಬಿಡುಗಡೆಯಾಗಬೇಕಾದಾಥ ಎಲ್. ಓ. ಸಿ. ಚಿತ್ರ ಇದರಲ್ಲಿ ಇದೆ. ಆದರೆ ಇಂತಹ ಡಿಸ್ಟ್ರಿಕ್ಟ್‌ಗೆ ಇಷ್ಟೇ ಹಣ ಎಂದು ಬಿಡುಗಡೆ ಮಾಡುವುದಕ್ಕೆ ಆಗುವುದಿಲ್ಲವೇ ಎಂದು ಹೇಳುತ್ತಾ ಇದ್ದೇನೆ. ಡಿಸ್ಟ್ರಿಕ್ಟ್ ಬಗ್ಗೆ ಹೇಳುವಾಗ ನೇರವಾಗಿ ನಿರ್ದಿಷ್ಟವಾದಂಥ ಕೆಲಸಕ್ಕೆ ಬಜೆಟ್‌ನಲ್ಲಿ ಇಟ್ಟಿರತಕ್ಕಂಥ ಹಿಂದು ಮೊತ್ತಕ್ಕೆ ಅನುಗುಣವಾಗಿ ಯಾವ ಆಧಾರದ ಮೇಲೆ ಪ್ರತಿ ತಿಂಗಳೂ ಎಲ್.ಓ.ಸಿ. ಬಿಡುಗಡೆ ಮಾಡುತ್ತಾ ಇದ್ದಾರೆ ಎನ್ನುವುದು ಗೊತ್ತಾಗಲಿಲ್ಲ.